**೧ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ನಾಗಮಂಗಲ.**

## ಸಿ.ಸಿ. 584/2020

ಸಾಕ್ಷಿದಾರರ ಹೇಳಿಕೆ ಃ

| | | |
|---|---|---|
| ಹೆಸರು | ಕೃಷ್ಣೇಗೌಡ | ಚಾಸಾಃ 2 ಪ್ರಾಸಾಃ 1 |
| ತಂದೆಯ ಹೆಸರು | ಮುದ್ದಯ್ಯ | |
| ವಯಸ್ಸು | 57 ವರ್ಷ | |
| ವೃತ್ತಿ | ವ್ಯವಸಾಯ | |
| ವಾಸಸ್ಥಳ | ದೊಡ್ಡಯಗೇಟಿ ಗ್ರಾಮ | |

ದಿನಾಂಕಃ 02.07.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

ಚಾ.ಸಾ-1 ನನಗೆ ಗೊತ್ತು, ಚಾಸಾ.3 ರಿಂದ 5 ನನಗೆ ಗೊತ್ತಿಲ್ಲ. ಈ ಪ್ರಕರಣದ ಆರೋಪಿ ನನಗೆ ಗೊತ್ತು. ಸಾಕ್ಷಿ ಮುಂದುವರೆದು ಅಪಘಾತವಾಗುವ ಕಾಲಕ್ಕೆ ಆರೋಪಿಯನ್ನು ನೋಡಿರುತ್ತೇನೆ ಎಂದು ಹೇಳುತ್ತಾರೆ. ಮೃತ ಚೇನ್ನಿಂಗೇಗೌಡಾ ನನಗೆ ಗೊತ್ತು. ಅಪಘಾತವಾಗುವ ಕಾಲಕ್ಕೆ ಸುಮಾರು 1 ಕಿ.ಮೀಟರ್ ದೂರದಲ್ಲಿ ಇದ್ದ ನಾನು ಮೃತ ಚೇನ್ನಿಂಗೇಗೌಡ ಕೆಳಗೆ ಬಿದ್ದಾಗ, ಅಲ್ಲಿಗೆ ಬಂದ ನಾನು ಅವರನ್ನು ನೋಡಿ ನಮ್ಮ ಸಂಬಂಧಿ ಎಂದು ತಿಳಿದು ಅವರ ಬಾಯಿಗೆ ನೀರು ಬಿಟ್ಟೆ. ನಂತರ ನಾಗಮಂಗಲ ಸರ್ಕಾರಿ ಆಸ್ಪತ್ರೆಗೆ ಮೃತ ಚೇನ್ನಿಂಗೇಗೌಡನನ್ನು ಚಿಕಿತ್ಸೆಗೆ ಕರೆದುಕೊಂಡು ಬಂದಾಗ ನಾಗಮಂಗಲ ಸರ್ಕಾರಿ ಆಸ್ಪತ್ರೆಯ ವೈದ್ಯರ ಸಲಹೆ ಮೇರೆಗೆ ಎ.ಸಿ.ಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಎ.ಸಿ.ಗಿರಿ ಆಸ್ಪತ್ರೆಯ ವೈದ್ಯರು ಸುಮಾರು ರಾತ್ರಿ 8.30 ಗಂಟೆಗೆ ಮೃತ ಚೇನ್ನಿಂಗೇಗೌಡ ನಿಧನರಾದರು ಎಂದು ತಿಳಿಸಿದರು. ಯಾರ ತಪ್ಪಿನಿಂದ ಅಪಘಾತವಾಯಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು

ಸುಮಾರು 1 ಕಿ.ಮೀಟರ್ ದೂರದಲ್ಲಿದ್ದ ಕಾರಣ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಅಪಘತವು ಟಿ.ವಿ.ಎಸ್ ಮತ್ತು ಸ್ಪೆಲ್ಡಂರ್ ದ್ವಿಚಕ್ರ ವಾಹನಗಳ ಸಂಬವಿಸಿದ್ದು ಅವುಗಳ ನೊಂದಾಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಈಗ ನೋಡುತ್ತಿರುವ ದಾಖಲಾತಿ ಸ್ಥಳಮಹಜರು ಆಗಿದ್ದು ಅದನ್ನು ನಿಪಿ.**1** ಎಂದು ಸಾಕ್ಷಿಯ ಸಹಿಯನ್ನು ನಿಪಿ.**1(ಎ)** ಎಂದು ಗುರುತಿಸಲಾಯಿತು. ನಿಪಿ.**1(ಎ)** ಅನ್ನು ನಾನು ಅಪಘಾತವಾದ ನಡೆದ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಆ ಸಮಯಕ್ಕೆ ಸಮಾರು ಸಂಜೆ 5.00 ರಿಂದ 5.15 ಗಂಟೆ ಆಗಿತ್ತು ಅದರೆ ದಿನಾಂಕ ನೆನಪಿಲ್ಲ. ನನ್ನ ಜೊತೆ ನಿಪಿ.1 ಕ್ಕೆ ಯಾರು ಯಾರು ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ಸ್ಧಳ ಮಹಜರು ಮಾಡುವ ಕಾಲಕ್ಕೆ ಪೋಲಿಸರು ಯಾವ ಯಾವ ವಸ್ತುಗಳನ್ನು ವಶಕ್ಕೆ ತೆಗೆಕೊಂಡರು ಎಂದು ನನಗೆ ಮಾಹಿತಿ ಇಲ್ಲ. ಈ ಘಟನೆಯ ಬಗ್ಗೆ ನಾನು ಯಾವುದೇ ಹೇಳಿಕೆಯನ್ನು ಪೋಲೀಸರಿಗೆ ನೀಡಿರುವುದಿಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ.**2** ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲು ಃ ಸ.ಸ.ಅ.ರವರಿಂದ ಃ</u>

ದಿಃ23.08.2019 ರಂದು ಅಪಘಾತವಾಯಿತು ಎಂದರೆ ನನಗೆ ದಿನಾಂಕ ಗೊತ್ತಿಲ್ಲ. ಆದರೆ ಸಮಯ ಸುಮಾರು ಸಂಜೆ 5.15 ಗಂಟೆಯ ಆಗಿತ್ತು. ಹರಳಕೆರೆ, ಕಲ್ಲಿನಾಥಪುರ ರಸ್ತೆಯಲ್ಲಿ ನಿಮ್ಮ ಮುಂದೆ ಟಿ.ವಿ.ಎಸ್ ಮೊಪೇಡ್ ವಾಹನ ಹೋಗುತ್ತಿತ್ತು ಎಂದರೆ ಸಾಕ್ಷಿಯು ಇಲ್ಲ ನಾನು 1 ಕಿ.ಮೀ ದೂರದಲ್ಲಿ ಇದ್ದೆ ಎಂದು ಹೇಳುತ್ತಾರೆ. ಎದುರಿನಿಂದ ಹರಳಕೆರೆಗ್ರಾಮದ ಕಡೆಯಿಂದ ನಾಗಮಂಗಲ ಕಡೆಗೆ ಒಂದು ಬಜಾಜ್ ಡಿಸ್ಕವರಿ ಮೋಟರ್ ಬೈಕ್ ಅತೀವೇಗ ಮತ್ತು ಅಜಾಗುರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ಟಿ.ಎಸ್ ಮೊಪೇಡ್ ವಾಹನಕ್ಕೆ ಡಿಕ್ಕಿ ಪಡಿಸಿದರು ಎಂದರೆ ಸಾಕ್ಷಿಯು ವಾಹನ ಡಿಕ್ಕಿ ಪಡಿಸಿದ ಬಗ್ಗೆ ನಾನು ನೋಡಲಿಲ್ಲ ಆದರೆ ಆ ಮೂವರು ಕೆಳಗೆ ಬಿದಿದ್ದನ್ನು ನಾನು ನೋಡಿದೆ ಎಂದು ಹೇಳುತ್ತಾರೆ. ಮೃತ ಚೇನ್ನಿಂಗೇಗೌಡರಿಗೆ ತಲೆಗೆ, ಬಲಗಣ್ಣಿನ ಬಳಿ, ಎಡಮಂಡಿ, ಬಲಮಂಡಿ ಹಿಂಬಾಗ, ಮೊಣಕಾಲಿನ ಬಳಿ ಪೆಟ್ಟಾಯಿತು ಎಂದರೆ ನಿಜ. ಡಿಸ್ಕವರಿನಲ್ಲಿ ಇದ್ದ ಇಬ್ಬರಿಗೆ ಚಿಕಿತ್ಸೆ ಪಡೆಯುವಂತಹ ಗಾಯವಾಗಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಮೂಗೇಟುಗಳಾಗಿದ್ದವು ಎಂದು ಹೇಳುತ್ತಾರೆ. ಅಪಘಾತವಾದ ವಾಹನಗಳ ಸಂಖೆ ಟಿ.ಎಸ್ ನಂಬರ್ ಕೆ.ಎ.02 ಹೆಚ್.

ಎಫ್ 4579 ಮತ್ತು ಡಿಸ್ಕವರಿ ಬೈಕ್ ನಂಬರ್ ಕೆ.ಎ.53-ಇ-9636 ಆಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಸ್ಥಳ ಮಹಜರಿನ ದಿನಾಂಕ ಗೊತ್ತಿಲ್ಲ. ಆದರೆ ಸುಮಾರು ಬೆಳಗ್ಗೆ 9.30 ರಿಂದ 10.00 ಆಗಿತ್ತು ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಅಪಘಾತಕ್ಕೆ ಒಳಗಾದ ಎರಡು ವಾಹನಗಳನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಹೇಳುತ್ತಾರೆ. ಸ್ಥಳ ಮಹಜರಿಗೆ ಚಾಸಾ 4 ಮತ್ತು 5 ರವರು ಬಂದಿದ್ದು ನಿಜ ಆದರೆ ಅಲ್ಲಿ ಅವರಿಬ್ಬರು ಪಂಚನಾಮೆಗೆ ಸಹಿ ಮಾಡಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ ವಕೀಲರಿಂದ

ದೊಡ್ಡ ಯಗೇಟಿಗೆ ಹೋಗಲು ನಾಗಮಂಗಲ-ಮಂಡ್ಯ ಹೆದ್ದಾರಿಯ ಮೂಲಕ ಹೋಗಬಹುದು ಎಂದರೆ ನಿಜ. ಸಾಕ್ಷಿಯು ಮುಂದುವರೆದು ಹರಳಕೆರೆ ಕಲ್ಲಿನಾಥಪುರ ಮುಖಾಂತರವು ದೊಡ್ಡಯಗೇಟಿಗೆ ಹೋಗಬಹುದು ಎಂದು ನುಡಿಯುತ್ತಾರೆ. ಅಪಘಾತದ ರಸ್ತೆ ಹಳ್ಳಿ ರಸ್ತೆ ಎಂದರೆ ನಿಜ. ಅಪಘಾತ ಸಂಭವಿಸಿದ ರಸ್ತೆ ಉತ್ತರ-ದಕ್ಷಿಣದ ದಿಕ್ಕಿನಲ್ಲಿರುತ್ತದೆ. ಸದರಿ ರಸ್ತೆಯು ಪೂರ್ವ -ಪಶ್ಚಿಮಕ್ಕೆ ಸುಮಾರು 12 ಅಡಿ ಉದ್ದ ಇರುತ್ತದೆ. ಸದರಿ ರಸ್ತೆಯ ತಿರುವು ಅಂಕು ಡೊಂಕು ಆಗಿದ್ದು, ಹಳ್ಳ-ದಿಣ್ಣೆ ಇದ್ದು, ಕಚ್ಚಾ ರಸ್ತೆಯಾಗಿರುತ್ತದೆ ಎಂದರೆ ನಿಜ. ಸದರಿ ರಸ್ತೆಗಳು ವಾಹನಗಳು ಅತೀ ವೇಗವಾಗಿ ಓಡಾಡಲು ಸಾಧ್ಯವಿಲ್ಲ ಎಂದರೆ ನಿಜ. ನಿಪಿ1 ರಲ್ಲಿ ಏನು ಬರೆದಿದೆ ಎಂದರೆ ಗೊತ್ತಿಲ್ಲ. ನಿಪಿ.1 ಕ್ಕೆ ನಾನು ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ, ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತ ಚೇನ್ನಿಂಗೇಗೌಡರು ನನ್ನ ಸಂಬಂಧಿಯಾಗಿರುವ ಕಾರಣ ಅಪಘಾತದ ವಿಚಾರ ನನಗೆ ತಿಳಿಯದೆ ಇದ್ದರು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

**(ಭಾನುಪ್ರಿಯ ಟಿ)**

**1** ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.

ಸಾಕ್ಷಿಯ ಸಹಿ